

ಫೋನು ಮೂರು ಬಾರಿ ರಿಂಗಾಯಿತು. ಅದು ನನ್ನ ಪ್ರೈವೇಟ್ ನಂಬರ್. ತುಂಬಾ ಹತ್ತಿರದವರಿಗೆ ಮಾತ್ರ ಗೊತ್ತು. ಮುಖ್ಯವಾದ ಮಾಹಿತಿ ನೀಡಲು ಕೆಲವು ಪೊಲೀಸರಿಗೂ ಗೊತ್ತು. ನಾನು ಕಾಲ್ ರಿಸೀವ್ ಮಾಡದಿದ್ದರೆ ಅವರ್‍ಯಾರೂ ಮತ್ತೆ ರಿಂಗ್ ಮಾಡುತ್ತಿರಲಿಲ್ಲ. ನಾನೇ ಅವರ ನಂಬರ್ ಗುರುತಿಸಿ ಕಾಲ್ ಮಾಡಬೇಕಿತ್ತು. ಆದರೆ, ಈ ಕಾಲ್‌ಗೆ ಮಾತ್ರ ನನ್ನ ಫೋನ್ ಮತ್ತೆ ಮತ್ತೆ ರಿಂಗಾಗುತ್ತಿದೆ. ನನ್ನ ಆರನೇಪ್ರಜ್ಞೆ ಜಾಗೃತವಾಯ್ತು. ನನ್ನನ್ನು ಖೆಡ್ಡಾಗೆ ಬೀಳಿಸಲು ಯಾವುದೋ ಹೊಸ ತಂತ್ರವಿರಬೇಕೆಂಬ ಅನುಮಾನ ಮೂಡಿಸಿತು.

ನಾನು ವಜ್ರದ ವ್ಯಾಪಾರಿ ಸತ್ಯೇಂದ್ರನ ಜೊತೆ ಮುಖ್ಯವಾದ ಮೀಟಿಂಗ್‌ನಲ್ಲಿದ್ದೆ. ಈ ವಹಿವಾಟು ಸಫಲವಾದರೆ, ಏನಿಲ್ಲವೆಂದರೂ ಕನಿಷ್ಠ ಮೂರು ಕೋಟಿ ರೂಪಾಯಿ ನನ್ನದಾಗುತ್ತಿತ್ತು. ನಾನು ಮಾತು ನಿಲ್ಲಿಸಿ, ಸತ್ಯೇಂದ್ರನ ಮುಖ ನೋಡಿದೆ. ಅವನೂ ಕೂಡಾ, ಈ ಅನಿರೀಕ್ಷಿತ ಕರೆಯಿಂದ ನನ್ನಷ್ಟೇ ವಿಚಲಿತನಾಗಿದ್ದ.